ಮೂಡಿಗೆರೆಯೆಂಬ ಪುಟ್ಟ ಊರಿಗೆ ಸರಕಾರಿ ಹೆಣ್ಣು ಮಕ್ಕಳ ಪ್ರೌಢಶಾಲೆಯಲ್ಲಿ ಅಮ್ಮ ಶಿಕ್ಷಕಿಯಾಗಿ ನೇಮಕವಾದಾಗ ನಾನು ಎರಡು ವರ್ಷದವಳು. ಒಂದಿಷ್ಟು ದಿನಗಳು ಜಾನಪ್ಪ ಗೌಡರ ಮನೆಯಲ್ಲಿ ಉಳಿದು ನಂತರ ಶಾಲೆಯೆದುರೇ ಇದ್ದ ಪುಟ್ಟ ಮನೆಗೆ ಶಿಫ್ಟ್ ಆದರು ಅಮ್ಮ. ಮುಂಡುಗೋಡಿನಿಂದ ಬಂದ ನಾಗಿ ಎನ್ನುವ ಹೆಣ್ಣುಮಗಳು ಅದೆಷ್ಟೋ ಸಮಯ ನನ್ನನ್ನು ನೋಡಿಕೊಳ್ಳುತ್ತಿದ್ದಳು. ಅಣ್ಣ ಶಿರಸಿಯಲ್ಲಿ ಸಿಂಡಿಕೇಟ್ ಬ್ಯಾಂಕಿನಲ್ಲಿ ಕೆಲಸ ಮಾಡಿಕೊಂಡು ಅಲ್ಲೇ ಒಂದು ಪುಟ್ಟ ಮನೆ ಮಾಡಿಕೊಂಡಿದ್ದರು. ನನಗೂ ನನಗಿಂತ ನಾಲ್ಕು ವರ್ಷ ದೊಡ್ಡವಳಿದ್ದ ಅಕ್ಕನಿಗೂ ಅಮ್ಮನಿಗೂ ಅಣ್ಣ ಸಿಗುತ್ತಿದ್ದದ್ದು ವಾರದ ಕೊನೆಗಷ್ಟೇ. ಶನಿವಾರ ರಾತ್ರೆಯಾಗುವುದನ್ನೇ ಕಾಯುತ್ತಿದ್ದೆವು, ಅವಾಗಿನ ಸರಕಾರಿ ಕೆಂಪು ಡಬ್ಬಿಯಲ್ಲಿ ಅಣ್ಣ ಬರುವಾಗ ರಾತ್ರಿಯಾಗುತ್ತಿತ್ತು. ಭಾನುವಾರ ರಾತ್ರಿ ಮತ್ತೆ ಹೊರಟು ಹೋಗುತ್ತಿದ್ದರು. ರಜೆಯಲ್ಲಿ ನಾವೆಲ್ಲಾ ಶಿರಸಿಗೆ ಹೋಗಿ ಇರುತ್ತಿದ್ದೆವು.

ಆಗಂತೂ ಫ್ರಿಡ್ಜ್, ಮಿಕ್ಸಿ, ವಾಷಿಂಗ್ ಮೆಷಿನ್, ಗ್ರೈಂಡರ್ ಏನೂ ಇಲ್ಲದ ಕಾಲ. ಅಮ್ಮ ಮನೆಗೆಲಸವನ್ನೆಲ್ಲಾ ಒಬ್ಬರೇ ಮಾಡಿಕೊಂಡು, ದಿನವೂ ಟೀಚಿಂಗ್ ನೋಟ್ಸ್ ಬರೆದು, ಮರುದಿನದ ಪಾಠದ ತಯಾರಿ ಮಾಡಿಕೊಂಡು, ಹೊರಗಡೆ ಹೋಗಿ ಮನೆ ಸಾಮಾನು, ತರಕಾರಿಗಳನ್ನು ಹೊತ್ತು ತಂದು, ನಮ್ಮನ್ನು, ಅದರಲ್ಲೂ ಮಹಾನ್ ತಂಟೆಕೋರಿಯಾದ ನನ್ನನ್ನು ಅದು ಹೇಗೆ ಸಂಭಾಳಿಸುತ್ತಿದ್ದರೋ ಇಂದಿಗೂ ಅರ್ಥವಾಗಿಲ್ಲ. ಅಷ್ಟೇ ಅಲ್ಲದೆ ಶಾಲೆಯಲ್ಲಿ ಆಗುವ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆಲ್ಲ ನಮ್ಮನೆಯಲ್ಲೇ ತಯಾರಿ! ಅಮ್ಮನ ಶಿಷ್ಯೆಯಂದಿರೆಲ್ಲ ಮನೆ ತುಂಬಿಕೊಳ್ಳುತ್ತಿದರು. ಆಗ ನನ್ನ ಹಿಡಿಯುವವರೇ ಇರುತ್ತಿರಲಿಲ್ಲ. ಆ ಕಾರ್ಯಕ್ರಮಗಳಿಗೆ ತರುತ್ತಿದ್ದ ಮೇಕಪ್ ಕಿಟ್ ಅಂತೂ ನನಗೊಂದು ವಿಸ್ಮಯ. ಅದರಲ್ಲಿದ್ದ ಎಲ್ಲವನ್ನೂ ಮುಟ್ಟಿ ಮುಟ್ಟಿ ನೋಡಿ, ಎಲ್ಲವನ್ನೂ ಮುಖಕ್ಕೆ ಬಳಿಸಿಕೊಂಡು ಸಂತಸಪಡುತ್ತಿದ್ದೆ.

ನನಗೆ ಹಣೆಗೆ ಹಚ್ಚುವ ಬಿಂದಿಯ ಹುಚ್ಚು. ಅದಕ್ಕಾಗ ಹಣೆಬೊಟ್ಟು ಎನ್ನುತ್ತಿದ್ದೆವು. ಬಣ್ಣ ಬಣ್ಣದ, ವಿವಿಧ ಸೈಜು, ಶೇಪಿನ ಬಿಂದಿಗಳೆಂದರೆ ಜೀವಬಿಡುತ್ತಿದ್ದೆ. ಅಮ್ಮನ ಶಿಷ್ಯೆಯರು ನೀರು ಕುಡಿಯಲೆಂದು ಆಗಾಗ ಮನೆಗೆ ಬರುತ್ತಿದ್ದರು. ಹೆಚ್ಚಿನವರು ಚಿಕ್ಕವಳಾದ ನನ್ನನ್ನು ನೋಡಿ, ಮುಟ್ಟಿ, ಮುದ್ದಿಸಿ ಮಾತನಾಡಲೆಂದೇ ಬರುವವರು. ಅವರಲ್ಲಿ ಯಾರೇ ಆದರೂ 'ಬಾ, ಹಣೆಬೊಟ್ಟು ಕೊಡ್ತೀನಿ' ಅಂದರೂ ಅವರ ಮನೆಗೆ ಹೊರಟುಬಿಡುತ್ತಿದ್ದೆ. ಅವರ ಮನೆಯಲ್ಲಿ ಕೊಟ್ಟ ತಿಂಡಿಯನ್ನೆಲ್ಲಾ ತಿಂದು, ಅವರ ಮನೆ ಪೂರ್ತಿ ಸರ್ವೆ ಮಾಡಿ 'ಅಮ್ಮನಿಗೆ ಹೇಳಬೇಡಿ' ಎಂದು ಅವರಿಗೆ ವಾರ್ನಿಂಗ್ ಕೊಟ್ಟು, ಚಿತ್ರ ವಿಚಿತ್ರ ಡಿಸೈನಿನ ಹಣೆಬೊಟ್ಟು ಹಿಡಿದುಕೊಂಡು ಮನೆಗೆ ಬರುತ್ತಿತ್ತು ನನ್ನ ಸವಾರಿ. ಕೆಲವೊಮ್ಮೆ ಅಮ್ಮ ಹುಡುಕಿ ಹುಡುಕಿ ಕಂಗಾಲಾಗುತ್ತಿದ್ದರು.

ಪ್ರತಿ ರಾತ್ರಿ ಮಲಗುವ ಮೊದಲು, ಅಡುಗೆಮನೆಯ ಎಲ್ಲ ಕೆಲಸ ಮುಗಿಸಿ ಅಮ್ಮ ಬಂದ ಮೇಲೆ ಮೂರೂ ಜನ ಚಂದಿರನನ್ನು ನೋಡುತ್ತಾ ಬಾಗಿಲ ಮೆಟ್ಟಿಲ ಮೇಲೆ ಕೂರುತ್ತಿದ್ದೆವು. ಆಗ ಮೊಸರಿಗೆ ಸಕ್ಕರೆ ಹಾಕಿ ಕಲೆಸಿ ಇಬ್ಬರಿಗೂ ಕಥೆ ಹೇಳುತ್ತಾ ತಿನ್ನಿಸುತ್ತಿದ್ದರು. ಒಂದೊಂದು ದಿನ ಒಂದೊಂದು ಕಥೆ. ಬೆಣ್ಣೆ ಕದ್ದ ಕೃಷ್ಣನ ಬಾಯಿಯಲ್ಲಿ ಬ್ರಹ್ಮಾಂಡ ನೋಡಿ ಬೆರಗಾಗಿರುವ ಯಶೋದೆ–ಗೋಪಾಲಕರ ಸುಂದರ ಚಿತ್ರವಿದ್ದ ಒಂದು ಕ್ಯಾಲೆಂಡರ್ ನಮ್ಮ ಮನೆಯಲ್ಲಿತ್ತು. ಅದರ ಕಥೆ ಹೇಳಮ್ಮ ಎಂದು ಪೀಡಿಸಿದಾಗ ಆ ಚೆಂದದ ಕಥೆಯನ್ನು ಹೇಳಿದ್ದರು ಅಮ್ಮ. ಮತ್ತೆ 'ಅಮ್ಮ, ನಾನು ದೇವರಾಣೆ ಬೆಣ್ಣೆ ಕದ್ದಿಲ್ಲಮ್ಮ' ಎಂಬ ಅತೀ ಚೆಂದದ ಹಾಡನ್ನು ಮೆಲುದನಿಯಲ್ಲಿ ಹಾಡುತ್ತಿದ್ದರು. ಅದೊಂದು ಸುಂದರ, ಅಚ್ಚಳಿಯದ ನೆನಪು.

ಒಂದು ದಿನ ಬಣ್ಣದ ಪೆನ್ಸಿಲ್ಲುಗಳನ್ನು ತರಲೆಂದು ಅಕ್ಕನೊಂದಿಗೆ ಹೋಗಿದ್ದೆ, ಅಕ್ಕ ತೆಗೆದುಕೊಳ್ಳುತ್ತಿದ್ದಳು. ನಾನು ಪಕ್ಕದ್ದಲ್ಲಿದ್ದ

> **'ಅಮ್ಮಾ ನಾನು ದೇವರಾಣೆ ಕದ್ದಿಲ್ಲಮ್ಮ' ಪ್ರಬಂಧವು ಹೆಣ್ಣು ಬದುಕಿನ ಎರಡು ತಲೆಮಾರುಗಳ ಕಥನವಾಗಿದೆ. ಹತ್ತು ಕೈಯ ದುರ್ಗೆಯ ಹಾಗೆ ಬಾಳು ಸಂಭಾಳಿಸಿದ, ಆಧುನಿಕ ಕಾಲದ ಮಹಿಳೆಯ ಹೆಣ್ತನದ ಸಾಮರ್ಥ್ಯ, ತನ್ನ ಸಂತಾನಕ್ಕೆ ಸತತ ಒಳಿತಿನ ತುತ್ತುಣ್ಣಿಸುವ ಅನೂಹ್ಯ ಶ್ರಮ, ಒಳಿತನ್ನು ಒಳಿತಾಗಿ ಕಾಪಾಡಿಕೊಳ್ಳುವುದು ಅದೆಷ್ಟು ಸಾಹಸದ್ದೆಂದು ಮಗುವಿನ ಮನಸ್ಸಿನ ಮೂಲಕ ನಿರೂಪಿಸಿದೆ.**
>
> **-ವಿನಯಾ ಒಕ್ಕುಂದ**

ಚೈತನ್ಯ ಸ್ಟೋರ್ಸಿನಲ್ಲಿ ನನಗಿಂತ ನಾಲ್ಕು ಪಟ್ಟು ಎತ್ತರವಿದ್ದ ಶೋಕೇಸಿನ ಮೇಲಿದ್ದ ಗಾಜಿನ ಜಾಡಿಯಲ್ಲಿ ಪೇರಿಸಿಟ್ಟ ಆಲ್ಕೋಹಾಲು ಎಂದು ನಾವು ಕರೆಯುತ್ತಿದ್ದ ಹಾಲು ಖೋವಾ, ಕೈಲಿ ದಾರ ಹಿಡಿದು ತಿರುಗಿಸೋ ಹತ್ತು ಪೈಸೆ ನಾಣ್ಯದ ಶೇಪಿನ ಗುಲಾಬಿ ಬಣ್ಣದ ಪೆಪ್ಪರಮಿಂಟು, ಚೆಂದದ ಪುಟ್ಟ ಪುಟ್ಟ ಡಬ್ಬಿಗಳಲ್ಲಿರುವ ಜೀರಿಗೆ ಮಿಠಾಯಿ, ಕಡ್ಲೆಮಿಠಾಯಿಗಳನ್ನು ನೋಡುತ್ತಾ, ಅಕ್ಕನ ಪೆನ್ಸಿಲ್ಲು ತೊಗೊಂಡು ಆದ ಮೇಲೆ ಉಳಿದ ಹಣದಲ್ಲಿ ಏನು ತೆಗೆದುಕೊಳ್ಳುವುದು ಎಂದು ಲೆಕ್ಕಾಚಾರ ಹಾಕುತ್ತಿದ್ದೆ. ನನ್ನ ಅಣ್ಣನಿಗಿಂತ ಸಾಕಷ್ಟು ಎತ್ತರ, ದಪ್ಪವಿರುವ ಯಾರೋ ಮಾಮ ಬಂದು ನಿಂತು ಅಂಗಡಿಯಾತನೊಂದಿಗೆ ಏನನ್ನೋ ಕೇಳಿದರು. ಅವರ ಸ್ವರವೂ ತುಂಬಾ ಚೆನ್ನಾಗಿತ್ತು. ಯಾಕೋ ನಾನು ತಲೆಯೆತ್ತಿ ನೋಡಿದೆ, ಮೊದಲೇ ಕುಳ್ಳಿ! ಗಡ್ಡ, ಮೂಗು ಮತ್ತೆ ಕನ್ನಡಕದ ಫ್ರೇಮು ಕಂಡಿತು. ಮತ್ತೆ ಅಕ್ಕನ ಬಳಿ ಹೋದಾಗ ಅವಳು ಮೆಲ್ಲನೆ ಉಸುರಿದಳು, 'ಅವರು ಪೂರ್ಣಚಂದ್ರ ತೇಜಸ್ವಿ ಕಣೇ, ತುಂಬಾ ದೊಡ್ಡ ಮನುಷ್ಯರು' ಅಂತ! ನಾನು ತಲೆ ತಿರುಗಿಸಿ ನೋಡುವಷ್ಟರಲ್ಲಿ ಅವರು ಹೊರಟಾಗಿತ್ತು.

ಆಡಿ ಬರಲು, ನಿದ್ದೆ ಮಾಡಲು ಮತ್ತು ತಿಂಡಿ ತಿಂದು ಬರಲು ಬಾಲವಾಡಿಗೆ ಹೋಗುತ್ತಿದ್ದೆ. ಯಾರೊಂದಿಗೂ ಮಾತು–ಕಥೆಯಿಲ್ಲ. ಹೋಗುವುದು, ಗುಮ್ಮನ ಹಾಗೆ ಕೂರುವುದು, ಡಬ್ಬದಿಂದ ತಿಂಡಿ ತಿನ್ನುವುದು ಮತ್ತು ಜಾರು ಬಂಡಿಯಾಡುವುದು. ಕೆಲವೊಮ್ಮೆ ಜೋಕಾಲಿಯಲ್ಲಿ ಕೂತು ತೂಗಿಕೊಳ್ಳುವುದು, ತುಂಬಾ ಮಕ್ಕಳು ಇರುತ್ತಿದ್ದರಿಂದ ಆ ಅವಕಾಶ ತುಂಬಾ ಕಡಿಮೆ ಸಿಗುತ್ತಿತ್ತು. ಹೀಗಾಗಿ ಎಲ್ಲಿ ಜೋಕಾಲಿ ಕಂಡರೂ ತೂಗುವ ಆಸೆಯಾಗುತ್ತದೆ. ಸರಿಕಟ್ಟಾಗಿ ಶಾಲೆಗೆ ಹೋಗಲು ಶುರು ಮಾಡಿದಾಗ ನಾಲ್ಕು ವರ್ಷ. ಮನೆಯಲ್ಲಿ ಕಾಟ ತಾಳಲಾರದೆ ಒಂದು ವರ್ಷ ಜಾಸ್ತಿ ತೋರಿಸಿ ಅಡ್ಮಿಶನ್ ಮಾಡಿಸಿದ್ದರು. ಹೊಸ ಯುನಿಫಾರ್ಮ್, ಶೂಸ್, ಬುಕ್ಸ್ ಆಸೆಗೆ ಸೇರಿದವಳಿಗೆ, ಶಾಲೆಯಲ್ಲಿದ್ದಷ್ಟೂ ಹೊತ್ತು ಪಂಜರದಲ್ಲಿ ಕೂಡಿ ಹಾಕಿದಂತೆ ಅನಿಸುತ್ತಿತ್ತು. ಯಾವಾಗ ಗಂಟೆ ಬಾರಿಸುತ್ತದೋ ಎಂದು ಕಾದು ಕುಳಿತಿರುತ್ತಿದ್ದೆ. ಇವತ್ತಿಗೂ ಶಾಲೆಗೆ ಹೋಗುವ ಮಕ್ಕಳನ್ನು ಕಂಡರೆ ಪಾಪ ಎಂದೇ ಅನಿಸುತ್ತದೆ.

ಶಾಲೆಯಲ್ಲಿ ಯಾರು ಏನು ಕೇಳಿದರೂ ಕೊಟ್ಟು ಬರುತ್ತಿದ್ದೆ. ನನ್ನ ಪೆನ್ಸಿಲ್, ರಬ್ಬರ್, ಬಳಪ, ಪುಸ್ತಕ, ಪುಸ್ತಕದಲ್ಲಿಟ್ಟ ನವಿಲುಗರಿ, ಬಣ್ಣದ ಪೆನ್ಸಿಲ್ಲುಗಳು, ಹೊಸ ಸ್ಲೇಟು ಎಲ್ಲವೂ... ಅಣ್ಣ ಅಮ್ಮನಿಗೆ ಏನು ಹೇಳಬೇಕು ಗೊತ್ತಾಗುತ್ತಿರಲಿಲ್ಲ. ಶಾಲೆಗೆ ಸೇರಿದ ಮೇಲೆ ನನ್ನ ಕಾಟ ಬೇರೊಂದು ರೂಪ ಪಡೆದಿತ್ತು! ಅಕ್ಕ 'ದಾನ ವೀರ ಶೂರ ಕರ್ಣಿ' ಎಂದೇ ಹೆಸರಿಟ್ಟಿದ್ದಳು. ಇವತ್ತೂ ಹಾಗೇ ಕರೆದು ಚುಡಾಯಿಸುತ್ತಿರುತ್ತಾಳೆ.

ಒಂದು ದಿನ ಬೆಳಗ್ಗೆ ಅಮ್ಮ ಕಸ ಗುಡಿಸುತ್ತಿದ್ದಾಗ ನನ್ನ ಚೀಲದಿಂದ ಏನೋ ಹರಿದುಬರುವುದು ಕಂಡಿತು. ಗಾಬರಿಯಾದ ಅಮ್ಮ ಚೀಲ ಕೊಡವಿದರೆ ನುಣುಪು ಕಲ್ಲುಗಳು, ತುಂಬಾ ಆಗಲಿ ಎಂದು ತುಂಡು ತುಂಡು ಮಾಡಿಟ್ಟ ಆನೆ ಬಳಪ, ಮರಳು, ಚಿಪ್ಪು, ನೆಲಕ್ಕೆ ತಿಕ್ಕಿ ಬಿಸಿ ತಾಗಿಸುವ ಹಣ್ಣು ಹುರುಳಿಕಾಯಿಯ ಥರದ ಅದ್ಯಾವುದೋ ಬೀಜಗಳು, ಸ್ಲೇಟು, ಗೋಲಿಗಳು, ಒಂದಿಷ್ಟು ತುಂಡಾದ ಹಳೇ ಪೆನ್ನು ಪೆನ್ಸಿಲ್ಲುಗಳು, ಇವಿಷ್ಟರ ಒಟ್ಟಿಗೆ ಗುಂಡು ಗುಂಡಾಗಿರುವ ಕೆಲವು ಕಾಯಿಗಳು ಉದುರಿದವು. 'ಏನಿದು' ಎಂದು ಅಮ್ಮ ಹತ್ತಿರ ಹೋಗಿ ನೋಡಿದರೆ, ಮುಟ್ಟಿದರೆ ಶೆಲ್ ಒಳಗೆ ಹೋಗಿ, ಪುಟ್ಟ ಚಕ್ಕುಲಿಯಂತಾಗುವ ಯಾವುದೋ ಹುಳಗಳು. ಹಾರಿ ಬಿದ್ದ ಅಮ್ಮ, ಅಕ್ಕ ಅವನ್ನೆಲ್ಲಾ ಎತ್ತಿ ಹೊರಗೆ ಬಿಸಾಕಿದ್ದರು. ನನಗೆ ಸಿಟ್ಟೋ ಸಿಟ್ಟು! ವಾರಾಂತ್ಯದಲ್ಲಿ ಎಲ್ಲಾ ರಿಪೋರ್ಟುಗಳು ಅಣ್ಣನಿಗೆ ಹೋಗುತ್ತಿದ್ದವು. ಅಣ್ಣ ನಕ್ಕೂ ನಕ್ಕೂ ಕಣ್ಣೀರು ಬರುತ್ತಿತ್ತು. ಒಟ್ಟಿನಲ್ಲಿ ಎಲ್ಲರೂ ನಗುವುದನ್ನು ನೋಡಿ ನಾನೂ ನಗುತ್ತಿದ್ದೆ.

ಅದೊಂದು ದಿನ ಬೆಳಗ್ಗೆ, ಎದ್ದಿದ್ದೇನೆ. ಹೆಚ್ಚಾಗಿ ಎದ್ದ ಕೂಡಲೇ 'ಅಮ್ಮಾ' ಎಂದು ಬೊಬ್ಬೆ ಹಾಕಿ ಅಳಬೇಕು, ಅಮ್ಮ ಇದ್ದ ಬಿದ್ದ ಎಲ್ಲಾ ಕೆಲಸ ಬಿಟ್ಟು ಓಡಿ ಬರಬೇಕು. ಆ ದಿನ ಮೇಜಿನ